ಎದುರಿಸಲು ಬ್ಯಾಂಕ್ ತನ್ನ ಗಳಿಕೆಯಲ್ಲಿ ಕೆಲವು ಭಾಗವನ್ನು ತೆಗೆದಿರಿಸಬೇಕಾಗುತ್ತದೆ. ಹೀಗಿರುವಾಗ ಮರಳಿ ಬಾರದ ಸಾಲವು ಬೆಳೆದಂತೆ ಬ್ಯಾಂಕ್‌ನ ಲಾಭವು ಕ್ಷೀಣಿಸುತ್ತಾ ಹೋಗುತ್ತದೆ. ಮುಂದೊಂದು ದಿನ ಅದು ಬ್ಯಾಂಕ್‌ನ ಲಾಭವನ್ನೇ ನುಂಗಿ ಹಾಕುತ್ತದೆ. ಕೊನೆಗೆ ಹಾನಿಯ ಭಾರವನ್ನು ತಾಳಲಾರದೆ ಬ್ಯಾಂಕ್ ಶಾಶ್ವತ ಬೀಗ ಹಾಕಬೇಕಾಗುತ್ತದೆ.

ಸ್ವಂತ ಬಂಡವಾಳ ಮತ್ತು ಜನರಿಂದ ಬಂದ ಠೇವಣಿಗಳು ಬ್ಯಾಂಕ್‌ನ ಹೊಣೆಗಾರಿಕೆಗಳು. ಬ್ಯಾಂಕ್ ಕೊಟ್ಟ ಸಾಲ ಮತ್ತು ನಗದು ಹಣ ಅದರ ಆಸ್ತಿ. ಈ ಸಂಗತಿಗಳಿಂದ ನಾವು ಬ್ಯಾಂಕ್‌ನ ಆರೋಗ್ಯದ ಬಗ್ಗೆ ತಿಳಿದುಕೊಳ್ಳಬಹುದು. ದಿನದ ವ್ಯವಹಾರದಲ್ಲಾಗುವ ಹಾನಿಯನ್ನು ನಿರ್ವಹಿಸುವ ಶಕ್ತಿ ಬ್ಯಾಂಕ್‌ನ ಸ್ವಂತ ಬಂಡವಾಳದಲ್ಲಿರುತ್ತದೆ. ಆದರೆ ಬಹಳಷ್ಟು ಬ್ಯಾಂಕ್ ಚಟುವಟಿಕೆಗಳು ಸಾಲವಾಗಿ ಪಡೆದ ಠೇವಣಿ ಹಣದಿಂದಲೇ ನಡೆಯುತ್ತವೆ ಎಂಬುದು ಸತ್ಯ. ಅವುಗಳ ಸಮಯ ಮುಗಿದಾಗ ಠೇವಣಿಗಳನ್ನು ಮರು ಪಾವತಿ ಮಾಡಬೇಕಾಗುತ್ತದೆ ಎಂಬುದೂ ಅಷ್ಟೇ ಸತ್ಯ.

ಬ್ಯಾಂಕ್ ಕೇವಲ ಠೇವಣಿದಾರರ ಹಣವನ್ನೇ ಅವಲಂಬಿಸಿದರೆ ಹೀಗಾಗುವುದು ಸಹಜ. ಇದನ್ನೇ ಒಂದು ಉದಾಹರಣೆಯ ಮೂಲಕ ನೋಡಿ: ಒಂದು ಬ್ಯಾಂಕ್ 100 ಕೋಟಿ ರೂಪಾಯಿ ಸಾಲ ಕೊಟ್ಟಿದೆ. ಅದು ಅದರ ಆಸ್ತಿ. ಅದರಲ್ಲಿ 4 ಕೋಟಿ ರೂಪಾಯಿ ಸ್ವಂತ ಬಂಡವಾಳ ಮತ್ತು 96 ಕೋಟಿ. ಠೇವಣಿ ಹಣವಾಗಿದೆ. ಹೀಗಿರುವಾಗ ಬ್ಯಾಂಕ್‌ಗೆ 3 ಕೋಟಿ. ಹಾನಿಯಾದರೆ ಬ್ಯಾಂಕ್ ಅದನ್ನು ಭರಿಸಬಲ್ಲದು. ಯಾಕೆಂದರೆ ಅದರ ಆಸ್ತಿಯು (97ಕೋ.ರೂ.) ಹೊಣೆಗಾರಿಕೆಗಿಂತಲೂ ( 96 ಕೋಟಿ ರೂಪಾಯಿ) ಹೆಚ್ಚಾಗಿದೆ. ಆದರೆ 6 ಕೋಟಿ ಸಾಲ ಮರಳಿ ಬಾರದಿದ್ದರೆ ಬ್ಯಾಂಕ್‌ನ ಹೊಣೆಗಾರಿಕೆಯು ಅದರ ಆಸ್ತಿಯನ್ನು ಮೀರುತ್ತದೆ. ಆಗ ಠೇವಣಿದಾರನ ಹಣವನ್ನು ಮರಳಿಸುವುದು ಅಸಾಧ್ಯವಾಗುತ್ತದೆ. ಇದೇ ಸ್ಥಿತಿ ನಿರಂತರ ಮುಂದುವರಿದರೆ ದಿವಾಳಿ ಸ್ಥಿತಿ ಅನಿವಾರ್ಯವಾಗಿ ಬರುತ್ತದೆ.

ತಮ್ಮ ಬ್ಯಾಂಕ್ ಎಷ್ಟೇ ಸುಸ್ತಿ ಸಾಲವಾದರೂ ಅದನ್ನು ಮೀರಿ ನಿಲ್ಲುವಷ್ಟು ಬಂಡವಾಳ ಹೊಂದಿದೆಯೆ ಎಂಬುದನ್ನು ಠೇವಣಿದಾರರು ತಿಳಿಯುವುದು ಅತ್ಯವಶ್ಯ. ಅದಕ್ಕಾಗಿ ನಾಲ್ಕು ಸೂತ್ರಗಳು ಇಲ್ಲಿವೆ.

**1. ಬಂಡವಾಳ ಸಾಕೆನಿಸುವ ಪ್ರಮಾಣ (Capital Adequacy Ratio ):** ಬ್ಯಾಂಕ್‌ನ ಬಂಡವಾಳದ ಸ್ಥಿತಿಯನ್ನು ತಿಳಿಯಲು ಇದು ಸಹಕಾರಿ. ಈಗಿನ ನಿಯಮಗಳ ಪ್ರಕಾರ, ಬ್ಯಾಂಕ್‌ಗಳು ತಮ್ಮ 'ಅಪಾಯ– ಭಾರದ ಆಸ್ತಿ'ಯ 9% ರಷ್ಟು ಬಂಡವಾಳವನ್ನು ಹೊಂದಿರಬೇಕು. ಇದಕ್ಕೆ ಬಂಡವಾಳ ಸಾಕೆನಿಸುವ ಪ್ರಮಾಣವೆಂದು ಹೇಳಲಾಗಿದೆ. ಈ 'ಅಪಾಯ –ಭಾರದ ಆಸ್ತಿ' ಎಂದರೇನು? ಬಂಡವಾಳದ ಮೊತ್ತವನ್ನು ಸಾಲಗಾರರ ಖಾತೆಗೆ ಜೋಡಿಸಲಾಗಿದೆ. ಅಪಾಯ ಭರಿತ ಸಾಲ ಕೊಟ್ಟರೆ ಅದಕ್ಕೆ ಹೆಚ್ಚು ಬಂಡವಾಳ ಬೇಕು. ಅಪಾಯ ಕಡಿಮೆಯಿದ್ದರೆ ಕಡಿಮೆ ಬಂಡವಾಳ. ಸಾಲ ಸುಸ್ತಿಯಾಗುವ ಅಪಾಯದ ಪ್ರಮಾಣವನ್ನು ಅವಲಂಬಿಸಿ ಸಾಲಗಳಿಗೆ ವಿವಿಧ ಭಾರಗಳನ್ನು ಕೊಡಲಾಗಿದೆ. ಉದಾಹರಣೆಗೆ, ಕೇಂದ್ರ ಸರಕಾರಕ್ಕೆ ಕೊಟ್ಟ ಸಾಲಗಳಿಗೆ ಅಪಾಯದ ಭಾರ ಶೂನ್ಯ. ಆದರೆ ರಿಯಲ್ ಎಸ್ಟೇಟ್‌ಗಳಿಗೆ ಕೊಟ್ಟ ಸಾಲದ ಅಪಾಯ ಭಾರ ಶೇಕಡಾ 100ರಷ್ಟು.

ಬ್ಯಾಂಕ್‌ನ ಬಡವಾಳದಲ್ಲಿ ಎರಡು ಪ್ರಕಾರಗಳಿವೆ. ಮೊದಲನೆಯದ್ದು, ಬ್ಯಾಂಕ್‌ನ ಸ್ವಂತ ಬಂಡವಾಳ ಮತ್ತು ಎರಡನೆಯದ್ದು ಹೊರಗಿನಿಂದ ಬಂದ ಬಂಡವಾಳ. ಬೆಸೆಲ್–111 ನಿಯಮದ ಪ್ರಕಾರ, ಬ್ಯಾಂಕ್‌ನ ಒಂದನೇ ಪ್ರಕಾರದ ಬಂಡವಾಳವು ಶೇಕಡಾ 6.5ರಷ್ಟಿರಬೇಕು.

ಬಂಡವಾಳ ಸಾಕೆನಿಸುವ ಪ್ರಮಾಣವು ಕಡಿಮೆಯಿದೆ ಎಂಬ ಒಂದೇ ಕಾರಣದಿಂದ ಬ್ಯಾಂಕ್ ಅತಂತ್ರ ಸ್ಥಿತಿಗೆ ಬರಲಾರದು. ಬ್ಯಾಂಕ್ ತನ್ನ ಸ್ವಂತ ಬಂಡವಾಳವನ್ನು ಹೆಚ್ಚಿಸುತ್ತಿದೆಯೊ ಅಥವಾ ಕೆಟ್ಟ ಸಾಲದಿಂದಾಗಿ ಅದು ಕರಗುತ್ತಿದೆಯೊ ಎಂಬುದನ್ನು ತಿಳಿಯುವುದು ಮಹತ್ವದ್ದು.

**2. ಆಸ್ತಿಯ ಗುಣ:** ಗ್ರಾಹಕರಿಗೆ ಕೊಟ್ಟ ಸಾಲವು ಬ್ಯಾಂಕ್‌ನ ಆಸ್ತಿಯಾಗಿದೆ. ಹೀಗಿರುವಾಗ ಸಾಲಗಳು ಕೆಟ್ಟ ಸಾಲಗಳಾದರೆ ಬ್ಯಾಂಕ್‌ನ ಆಸ್ತಿ ಕುಸಿಯುತ್ತದೆ. ಈ ಮರಳಿ ಬಾರದ ಸಾಲ ಬೆಳೆದಂತೆ ಅದಕ್ಕಾಗಿ ಬ್ಯಾಂಕ್ ಹೊಸ ಅವಕಾಶಗಳನ್ನು ಸೃಷ್ಟಿಸಬೇಕಾಗುತ್ತದೆ. ಅದಲ್ಲದೆ ಈ ಕೆಟ್ಟ ಸಾಲದ ಜೊತೆಗೆ ಪುನರ್‌ರಚಿತ ಸಾಲಗಳೂ ಇರುತ್ತವೆ. ಪುನರ್‌ರಚಿತ ಸಾಲವೆಂದರೆ, ಸಾಲಗಾರನು ಸುಸ್ತಿದಾರನಲ್ಲ. ಆದರೆ ಸಾಲ ಮರುಪಾವತಿಗೆ ಹೆಚ್ಚು ಸಮಯ ಕೇಳುತ್ತಾನೆ. ಇದು ಒತ್ತಡಕ್ಕೊಳಗಾದ ಆಸ್ತಿ. ಕ್ಷೀಣ ಬಂಡವಾಳದ ಅಡಿಪಾಯದ ಜೊತೆಗೆ ಒತ್ತಡಕ್ಕೊಳಗಾದ ಆಸ್ತಿಯನ್ನೂ ಠೇವಣಿದಾರರು ಗಮನಿಸಬೇಕಾಗುತ್ತದೆ.

**3. ಆಸ್ತಿ ಹೊಣೆಗಾರಿಕೆಯ ಅಂತರ:** ಬ್ಯಾಂಕ್‌ನ ಆಸ್ತಿಯು ಎಷ್ಟರ ಮಟ್ಟಿಗೆ ಅದರ ಹೊಣೆಗಾರಿಕೆಗೆ ಹೋಲಿಕೆಯಾಗುತ್ತದೆ ಎಂಬುದನ್ನು ಇದು ಹೇಳುತ್ತದೆ. ಇದನ್ನು ತಿಳಿಯುವ ಸುಲಭ ಸೂತ್ರವೆಂದರೆ ಒಂದೆಡೆ ಬ್ಯಾಂಕ್‌ನ ಹೂಡಿಕೆಗಳು, ಕೊಟ್ಟ ಸಾಲಗಳು ಮತ್ತು ಬ್ಯಾಂಕ್‌ನಲ್ಲಿರುವ ನಗದು ಹಣವನ್ನು ಒಟ್ಟು ಮಾಡಿ. (ಇದು ಅದರ ಆಸ್ತಿ.) ಇನ್ನೊಂದೆಡೆ ಆ ಬ್ಯಾಂಕ್ ಪಡೆದ ಠೇವಣಿ ಮತ್ತು ಸಾಲಗಳನ್ನು ಒಟ್ಟು ಮಾಡಿ. (ಇದು ಅದರ ಹೊಣೆಗಾರಿಕೆ) ಅವೆರಡೂ ಭಾಗಗಳನ್ನು ಹೋಲಿಸಿ ನೋಡಿ. ಆಸ್ತಿಯು ಹೊಣೆಗಾರಿಕೆಗಿಂತಲೂ ಹೆಚ್ಚಿದ್ದರೆ ಬ್ಯಾಂಕ್‌ನ ಆರೋಗ್ಯ ಚೆನ್ನಾಗಿದೆ ಎಂದರ್ಥ. ಇದಕ್ಕೆ ವಿರುದ್ಧವಾಗಿದ್ದರೆ ಬ್ಯಾಂಕ್ ರೋಗಗ್ರಸ್ತವಾಗಿದೆ ಎಂಬುದು ಸ್ಪಷ್ಟ.

**4. ದ್ರವತ್ವ:** ಬ್ಯಾಂಕ್‌ನ ಭಾಷೆಯಲ್ಲಿ ಇದನ್ನು ಲಿಕ್ವಿಡಿಟಿ ಎನ್ನುತ್ತಾರೆ. ಗ್ರಾಹಕನು ತನ್ನ ಠೇವಣಿ ಹಣವನ್ನು ಬೇಡಿದಾಗ ಕೊಡುವಷ್ಟು ನಗದು ಹಣವಿದ್ದರೆ ಬ್ಯಾಂಕು ದ್ರವತ್ವ ಹೊಂದಿದೆ ಎಂದರ್ಥ. ಈ ದ್ರವತ್ವ ಕಡಿಮೆಯಾದರೆ ಠೇವಣಿದಾರನು ಬೇಡಿದಾಗ ಕೊಡಲು ಹಣವಿರುವುದಿಲ್ಲ. ಆಗ ಬ್ಯಾಂಕ್ ಮೇಲೆ ಜನರ ವಿಶ್ವಾಸ ಇಲ್ಲವಾಗುತ್ತದೆ. ಆಸ್ತಿ ಮತ್ತು ಹೊಣೆಗಾರಿಕೆಯ ಹೊಂದಾಣಿಕೆ ಇಲ್ಲದಿರುವುದೇ ಇದಕ್ಕೆ ಕಾರಣ. ಇದು ಜನರಿಗೆ ತಿಳಿದರೆ ಎಲ್ಲ ಗ್ರಾಹಕರು ಒಟ್ಟುಗೂಡಿ ಏಕಕಾಲಕ್ಕೆ ಹಣ ಮರಳಿ ಪಡೆಯಲು ಬ್ಯಾಂಕ್‌ಗೆ ಬರುತ್ತಾರೆ. ಇದು ದ್ರವತ್ವದ ದೊಡ್ಡ ಸಂಕಟ. ಇದು ಮುಂದುವರಿದರೆ ಬ್ಯಾಂಕ್ ವ್ಯವಹಾರ ನಿಲ್ಲಿಸಬೇಕಾಗುತ್ತದೆ

## ಭಯ ಬೇಡ

ಮೇಲಿನ ಸಂಗತಿಗಳು ಎಲ್ಲ ದೇಶದ ಬ್ಯಾಂಕ್‌ಗಳಿಗೆ ಅನ್ವಯಿಸುತ್ತವೆ. ಆದರೆ ಇಂಥ ತೊಂದರೆಗಳು ಭಾರತೀಯ ಬ್ಯಾಂಕ್‌ಗಳಿಗೆ ಬಾರದಂತೆ ಭಾರತೀಯ ರಿಸರ್ವ್ ಬ್ಯಾಂಕ್ ಕೆಲವು ಕ್ರಮಗಳನ್ನು ಜಾರಿಗೊಳಿಸಿದೆ. ಅದರ ಪ್ರಕಾರ, ಬ್ಯಾಂಕ್‌ಗಳು ಸ್ವೀಕರಿಸುವ ಠೇವಣಿಗಳಲ್ಲಿ ಶೇಕಡಾ 4ರಷ್ಟು ಹಣವನ್ನು ನಗದು ಮೀಸಲು ಎಂದು ರಿಸರ್ವ್ ಬ್ಯಾಂಕ್‌ನಲ್ಲಿ ಇಡಬೇಕಾಗುತ್ತದೆ. ಇದರ ಜೊತೆಗೆ ಠೇವಣಿ ಮೊತ್ತದ ಶೇಕಡಾ 20ರಷ್ಟನ್ನು ಸರಕಾರಿ ಭದ್ರತಾ ಪತ್ರಗಳಲ್ಲಿ ತೊಡಗಿಸಬೇಕಾಗುತ್ತದೆ. ಈ ಭದ್ರತಾ ಪತ್ರಗಳನ್ನು ಸುಲಭವಾಗಿ ಹಣಕ್ಕೆ ಪರಿವರ್ತಿಸಬಹುದು. ಅಂತಹ –ಬ್ಯಾಂಕ್ ಪೇಟೆಯಿಂದ ಹಣ ಪಡೆಯಬಹುದು ಮತ್ತು ತಮ್ಮ ಹೆಚ್ಚುವರಿ ಭದ್ರತಾ ಪತ್ರಗಳನ್ನು ರಿಸರ್ವ್ ಬ್ಯಾಂಕ್‌ನಲ್ಲಿ ಅಡವಾಗಿಟ್ಟು ಹಣ ಪಡೆಯಬಹುದು. ರಿಸರ್ವ್ ಬ್ಯಾಂಕ್ ಮಾಡಿರುವ ಇಂಥ ಕ್ರಮಗಳಿಂದಾಗಿಯೇ ಭಾರತೀಯ ಬ್ಯಾಂಕ್‌ಗಳು ದ್ರವತ್ವದ ಸಂಕಟದಲ್ಲಿ ಸಿಲುಕಿದ ಉದಾಹರಣೆಗಳು ಕಡಿಮೆಯಾಗಿವೆ.

ಭಾರತದಲ್ಲಿ ಬಹಳಷ್ಟು ಬ್ಯಾಂಕ್‌ಗಳು ಕೇಂದ್ರ ಸರಕಾರದ ಒಡೆತನದಲ್ಲಿವೆ. ಕಾರಣ ಅವು ದ್ರವತ್ವದ ಕೊರತೆಯಲ್ಲಿ ಸಿಲುಕಿದಾಗ ಕೇಂದ್ರ ಸರಕಾರವು ಅದಕ್ಕೆ ಬಂಡವಾಳದ ಸಹಾಯ ಮಾಡುತ್ತದೆ. ಇತ್ತೀಚೆಗೆ 2.11 ಲಕ್ಷ ಕೋಟಿ ರೂಪಾಯಿ ಮೊತ್ತದ ಮರು ಬಂಡವಾಳೀಕರಣ ಮಾಡಲಾಗಿದೆ.

ಇಂಥ ಸುರಕ್ಷತಾ ಕ್ರಮಗಳ ಹೊರತಾಗಿಯೂ ಯಾವುದೇ ಬ್ಯಾಂಕ್ ಅತಂತ್ರ ಸ್ಥಿತಿಯಲ್ಲಿದೆ ಎಂದೆನಿಸಿದರೆ, ಠೇವಣಿದಾರರ ಸುರಕ್ಷಿತತೆಗಾಗಿ ಠೇವಣಿ ವಿಮಾ ಯೋಜನೆಯಿದೆ. ರಿಸರ್ವ್ ಬ್ಯಾಂಕ್‌ನ ಒಡೆತನದಲ್ಲಿರುವ ಠೇವಣಿ ವಿಮಾ ಕಾರ್ಪೊರೇಶನ್ ಈ ಕಾರ್ಯ ಮಾಡುತ್ತದೆ. ಎಲ್ಲ ಬ್ಯಾಂಕ್‌ಗಳ ಠೇವಣಿಗಳಿಗೂ ಇದು ಅನ್ವಯಿಸುತ್ತದೆ. ಇದರಡಿಯಲ್ಲಿ ಪ್ರತಿ ಗ್ರಾಹಕನಿಗೆ ಒಂದು ಲಕ್ಷ ರೂಪಾಯಿವರೆಗಿನ ಠೇವಣಿಗೆ ಭದ್ರತೆಯಿದೆ.

ಈ ಎಲ್ಲ ಪ್ರಯತ್ನಗಳಿಗೆ ಮೀರಿಯೂ ಬ್ಯಾಂಕ್ ತೊಂದರೆಯಲ್ಲಿ ಸಿಲುಕಿದರೆ ಅಂತಹ ಬ್ಯಾಂಕ್‌ಅನ್ನು ಮತ್ತೊಂದು ಶಕ್ತಿಯುತ ಬ್ಯಾಂಕ್‌ನಲ್ಲಿ ವಿಲೀನಗೊಳಿಸುವುದೂ ನಡೆದಿದೆ.